# ಪಾದ ನಖ ಪರಿಪೂರ್ಣ

**(ಶ್ರೀ ಹರಿ ಪರಿಪೂರ್ಣ ಸುಳಾದಿ)**

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru.
3. **Note:** The wordings given without highlights are as per the above references. The difference in wordings marked in yellow highlights are as per the singer

**ರಾಗ: ತೋಡಿ**

**ಧೃವ ತಾಳ**

(ಪಾದ) (ಪದ) ನಖ ಪರಿಪೂರ್ಣ ಜಾನು ಜಂಘೆ ಪರಿಪೂರ್ಣ
ಊರುಕಟಿ ಪರಿಪೂರ್ಣ ಜಘನಾ ಪರಿಪೂರ್ಣ
ಉದರ ತ್ರಿವಳಿ ವಕ್ಷ ಬಾಹು ಪರಿಪೂರ್ಣ
ಪದುಮ ಗದೆ ಚಕ್ರ ಶಂಖ ಪರಿಪೂರ್ಣ
ವದನ ಪರಿಪೂರ್ಣ ಕಂಬು ಕಂಠ ಪರಿಪೂರ್ಣ
ಸರ್ವಾಂಗ ಪರಿಪೂರ್ಣ ಪುರಂದರ ವಿಠ್ಠಲನ
ಸರ್ವಾಂಗ ಪರಿಪೂರ್ಣ ॥ ೧ ॥

**ಮಟ್ಟ ತಾಳ**

ಹಮ್ಮು ಪರಿಪೂರ್ಣ (ಮನ್ಯೆ) (ಮನ್ಯು) ಪರಿಪೂರ್ಣಾ
(ತುಮ್ಮಾ) (ಸುಮ್ಮನ) ಪರಿಪೂರ್ಣ
ಬುದ್ಧಿ ಪರಿಪೂರ್ಣ ಚಿತ್ಸುಖ ಪರಿಪೂರ್ಣ
ಪುರಂದರ ವಿಠ್ಠಲನ ಹಮ್ಮು ಪರಿಪೂರ್ಣ ॥ ೨ ॥

**ಝಂಪೆ ತಾಳ**

ಅನಂತ ಬಾಹುವಾಗಿ ಅನಂತ ಚಕ್ಷುವಾಗಿ

ಅನಂತ ಕಲ್ಪದಲ್ಲಿ ಅನಂತ ನಾಮ ಶ್ರೀ ಪುರಂದರ ವಿಠ್ಠಲನ
ಅನಂತ ಅವತಾರಗಳು ಪರಿಪೂರ್ಣ
ಅನಂತ ಅವತಾರಗಳು ಪರಿಪೂರ್ಣ ॥ ೩ ॥

**ಅಟ್ಟ ತಾಳ**

ಶ್ರೋತುರ ನೇತುರ ಘ್ರಾಣ ತ್ವಗ್ರಸನವ
ಪಾಣಿ ಪಾದ ಪಾಯೋಪಸ್ಥಾದಿ ಈರೈದು
ಮಾತರಿಶ್ವಪ್ರಿಯ ಪುರಂದರ ವಿಠ್ಠಲನ
ಜ್ಞಾನ ಕರ್ಮೇಂದ್ರಿಯಗಳು ಪರಿಪೂರ್ಣ ॥ ೪ ॥

**ಏಕ ತಾಳ**

ಆವಾವ ಕಾಲದಲ್ಲಿ ಆವಾವ ದೇಶದಲ್ಲಿ
ಆವಾವ ಜೀವರಲ್ಲಿ ಶ್ರೀ ವಲ್ಲಭ ಪರಿಪೂರ್ಣ
(ಭೂ ವಲ್ಲಭ ಪರಿಪೂರ್ಣ ಸಕಲ ಲೋಕದೊಳೊಬ್ಬ
ಪುರಂದರ ವಿಠ್ಠಲನು ಪೂರ್ಣ ಪಾದನಖ ಪರಿಪೂರ್ಣ)
(ಪುರಂದರ ವಿಠ್ಠಲ ಪರಿಪೂರ್ಣ
ಆವಾವ ದೇಶದಲ್ಲಿ) ॥ ೫ ॥

**ಜತೆ**

(ಪರಿಪೂರ್ಣ ಜ್ಞಾನ ಪೂರ್ಣ ಆನಂದ ಪರಿಪೂರ್ಣ
ಪುರಂದರ ವಿಠ್ಠಲ ವಿಭುವೆ ಪಾದನಖ ಪರಿಪೂರ್ಣ)
(ಅರಸೇ ಇಂದಿರೇ ಪರಿಪೂರ್ಣ ಪುರಂದರ ವಿಠ್ಠಲ
ಸರಸಿಜೋದ್ಭವ ಶರ್ವಾದಿಗಳೆಲ್ಲ ಅಪೂರ್ಣರು) ॥ ೬ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

೧. ಶ್ರೀ ಹರಿ ಪರಿಪೂರ್ಣನಿರುವನೆಂಬುದನ್ನು ದಾಸರು ವಿವರವಿವರವಾಗಿ ಇದರಲ್ಲಿ ಹೇಳಿದ್ದಾರೆ. ಇದೇ ವಿಚಾರವು ಈಶಾವಾಸಯೋಪನಿಷತ್ತಿನ ಶಾಂತಿ ಮಂತ್ರದಲ್ಲಿ ಕಾಣುತ್ತದೆ.

**ಜಾನು** = ಮೊಣಕಾಲು

**ಜಂಘೆ** = ಕಣಕಾಲು

**ಊರು** = ತೊಡೆ

**ಕಟಿ** = ನಡು

**ತ್ರಿವಳಿ** = ತಳ ಹೊಟ್ಟೆಯ ಮೇಲಿನ ಮೂರು ಗೆರೆಗಳು

(ಇವು ಸೌನ್ದರ್ಯದ ಲಕ್ಷಣವೆಂದು ಕವಿಗಳು ಬಣ್ಣಿಸುತ್ತಾರೆ)

**ಕಂಬು** = ಶಂಖ

**ವಿ.ಸೂ : -** ಪರಮಾತ್ಮನ ಪ್ರತಿಯೊಂದು ಅಂಗವು ಪರಿಪೂರ್ಣವಾಗಿದೆ ಎಂಬುದು ಇದರ ಭಾವ.

೨. ಪರಮಾತ್ಮನ ಭಾವಗಳೂ ಪರಿಪೂರ್ಣವೆಂಬ ವಿಚಾರವನ್ನು ಇಲ್ಲಿ ಕಾಣಬಹುದು.

**ಹಮ್ಮು** = ಅಹಂಕಾರ

**ಮನ್ಯು** = ಸಿಟ್ಟು

**ಸುಮ್ಮನ** = ಸಂತೋಷ (ಸುಮ್ಮಾನ)

೩. **ಅನಂತಬಾಹು** = ಅನೇಕ ಬಾಹೂದರ ವಕ್ತ್ರ ನೇತ್ರಂ ........ (ಭಗವದ್ಗೀತೆಯ ೧೧/೧೬)

ಸಹಸ್ರ ಶೀರ್ಷಾ ಪುರುಷಃ ಸಹಸ್ರ ಸ್ರಾಕ್ಷಃ ಸಹಸ್ರಪಾತ್

(ರಿಗ್ವೇದದ ಋಗ್ ೧೦ನೆಯ ಮಂಡಲ ೯ ನೆಯ ಸೂಕ್ತ)

೪. ಪರಮಾತ್ಮನ ದಶೇಂದ್ರಿಯಗಳೂ ಪರಿಪೂರ್ಣ

**ಶ್ರೋತುರ** = ಕಿವಿ

**ನೇತುರ** = ಕಣ್ಣು

**ರಸನ** = ನಾಲಿಗೆ

**ಪಾಯು** = ಗುದದ್ವಾರ

**ಉಪಸ್ಥ** = ಜನನೇಂದ್ರಿಯ

**ಮಾತರಿಶ್ವ** = ವಾಯು ದೇವರು

೫. ಸರ್ವರಲ್ಲಿ, ಸರ್ವತ್ರದಲ್ಲಿ, ಸರ್ವಕಾಲದಲ್ಲಿ ಪರಮಾತ್ಮನೊಬ್ಬನೇ ಪರಿಪೂರ್ಣ.

೬. **ಪರಿಪೂರ್ಣ** = ದೇಹ, ಗುಣ, ಕ್ರಿಯಾ ಮುಂತಾದವು ಪರಿಪೂರ್ಣ

**ಜ್ಞಾನಪೂರ್ಣ** = ಜ್ಞಾನದಿಂದ ಪರಿಪೂರ್ಣ

**Classification:** Suladi

**Name of Suladi:** Sri Hari Paripurna Suladi

**Ankita:** purandara vittala

**Location:** NA

**Category:** Krishna Stuti, Vishnu Stuti

**Sub-Category:** Vishnu, Krishna, shankha, chakra, buddi, sukha, Ananta, jnana, karma, loka, Ananda, arasa,

**Pravachana:** NA

**Explanation:** NA